ಮಾಲತಿಗೆ ಈ ರೋಚಕ ವಿದ್ಯಮಾನ ಮಗಳ ಮಾನಭಂಗಕ್ಕೆ ಸಮಾನವೆಂದು ವ್ಯಥೆಯಾಯಿತು. ತಾಯಿಯ ಸಂಕಟ ನೋಡಿ ಸಂಪದ, "ಅದು ಕಥೆಯಪ್ಪ" ಎಂದು ತಿಳಿ ಹೇಳಲು ಯತ್ನಿಸಿದಳು. ಮರುಕ್ಷಣ, "ಅದು ಕಥೆಯಾಗಿದ್ರೆ ಹೆಸರಾದ್ರೂ ಬ್ಯಾರೆ ಇಡಕಾಗಿತ್ತು" ಎಂದು ತಾನೇ ಅಲವತ್ತುಕೊಂಡಳು. ಮಾಲತಿಯ ಅಸಹಾಯಕತೆ ಅದೆಷ್ಟು ಸತಾಯಿಸಲು ತೊಡಗಿತ್ತೆಂದರೆ ತಾನೆಲ್ಲಿ ಬಾಬಣ್ಣನಿಗೆ ಅರ್ಪಿಸಿಕೊಳ್ಳುವ ಮಟ್ಟಕ್ಕೆ ಜಾರಿ ಬಿಟ್ಟರೆ ಎಂದು ಭಯವಾಯಿತು. ಸಂಪದಳಿಗೆ ತಡೆಯಲಾರದೆ ಒಂದು ದಿನ, "ಸದಾನಂದ ಬರೆದದ್ದು ನಿಜಾ ಆದ್ರೆ ಹೇಳ್ಬಿಡ್ತಿದ್ದೆ; ನಿಜ ಅಲ್ಲ, ಆದ್ರೆ ತಪ್ಪಲ್ಲ" ಎಂದಳು. ಮಂಚಿಕೇರಿ ಪೇಟೆಯಲ್ಲಿ ಮುಖ ಎತ್ತಿ ತಿರುಗುವುದು ಹೇಗೆಂದು ಮಾಲತಿಗೆ ಚಿಂತೆಯಾಯಿತು. "ಇಂದು ಎನ್ನ ಬಗ್ಗೆ ಕತೆ ಕಟ್ಟಿದವರೇ ನಿನ್ನೆ ಬಾಬಣ್ಣಂಗೆ ಸಂಬಂಧ ಇದ್ದು ಹೇಳ್ತೊ" ಎಂದಳು. ಮುಂದೆ ಮಾತಾಡಲು ಅವಳಿಗೆ ಭಯವಾಯಿತು. ಒಮ್ಮೆ ಸಂಪದ, "ಅಮ್ಮಾ ನೀನು ಇಂದು ಮಾತಾಡದೇ ಇದ್ರೆ ಆನು ಉಪಾಸ ಇರ್ತೆ" ಎಂದು ಹಟ ಹಿಡಿದಳು. ಮಾಲತಿ ಮಾತಾಡಲು ಯತ್ನಿಸಿ ಗದ್ಗದಿತಳಾದಳು.

ತಾನು ಬರೆದದ್ದು ಆತ್ಮಚರಿತ್ರೆಯೇ ಆಗಿರಬೇಕೆಂಬ ಜನರ ಹಟಮಾರಿತನ ಸದಾನಂದನಿಗೆ ಮೊದಮೊದಲು ತಮಾಶೆ ಅನಿಸಿತು. ಕಥೆ ಪೂರ್ತಿ ವಾಸ್ತವವಾಗಿರುವುದಿಲ್ಲ ಎಂದು ಓದುಗರನ್ನು ನಂಬಿಸುವುದು ಸಾಧ್ಯವಿರಲಿಲ್ಲ. ಬರೆದದ್ದೆಲ್ಲ ನಿಜ ಘಟನೆ ಎಂದು ಓದುಗರು ಭಾವಿಸಿದರೆ ಅಂತರ್ಯದಲ್ಲಿ ವಿಚಿತ್ರ ಖುಷಿಯೂ ಆಗುತ್ತಿತ್ತು. ಕಥೆ ನಿಜವೆಂದು ತಿಳಿದರೆ ಅದರ ಕಷ್ಟ ಹೇಗಿರುತ್ತದೆ ಎಂಬುದು ಬಾಬಣ್ಣನ ಭೇಟಿಯಾಗುವ ತನಕ ಗೊತ್ತಾಗಲಿಲ್ಲ. ತನ್ನ ಕಥೆಗೂ ಹರಿಗದ್ದೆ ಜಮೀನು ಮಾರಾಟಕ್ಕೂ ತಳಕುಹಾಕಿಕೊಂಡ ವಿಷಯ ದಿನದಿಂದ ದಿನಕ್ಕೆ ಜಟಿಲ ರಂಪವಾಗುತ್ತ ಸದಾನಂದ ಅಧೀರನಾಗಿದ್ದ. ಒಂದು ದಿನ ಬಾಬಣ್ಣ ಮಂಚಿಕೇರಿ ಪೇಟೆಯ ಪಾಯ್ದೆ ಚಾದಂಗಡಿಯ ಎದುರು ಸಿಕ್ಕಿದ. "ಬಾಬಣ್ಣ ನಿನ್ನತ್ರ ಸ್ವಲ್ಪ ಮಾತಾಡೋದಿತ್ತಲ್ಲ" ಸದಾನಂದ ರಸ್ತೆ ಪಕ್ಕೆ ಸರಿದು ಕೇಳಿದ. ಈ ಸಂದರ್ಭ ಕಾಯುತ್ತಿದ್ದ ಬಾಬಣ್ಣ, "ರಸ್ತೆ ಮ್ಯಾಲೆ ಸರಿ ಕಾಣೋದಿಲ್ಲ" ಎಂದವನೆ ಚಾದಂಗಡಿಯನ್ನು ಹೊಕ್ಕು ಮೂಲೆಯ ಬಾಂಕಿನ ಮೇಲೆ ಕುಳಿತ. ಚಪ್ಪೆ ಚಹಾಕ್ಕೆ ಹೇಳಿ, "ನಾನೇ ನಿಮ್ಮನೆಗೆ ಬರುವವನಿದ್ದೆ. ಕಥೆದೆ ಸಮಸ್ಯೆ ಆಗಿದೆ ಈಗ. ಮಂಚಿಕೇರಿ ಪ್ಯಾಟೆಯೇ ನಿಮ್ಮ ವಿರುದ್ಧ ತಿರುಗಿ ಬಿದ್ದದೆ. ಹರಿಗದ್ದೆ ಮಾಲತಿ ಬಂದು ಏನೊ ಪುಕಾರು ಕೊಟ್ಟು ಹೋಗಿದ್ದಾಳಂತೆ. ಅವಳ ಪೈಕಿ ಕೆಲವರು, 'ಇನ್ನೊಬ್ಬರ ಬಾಳು ಹಾಳು ಮಾಡೋದಕ್ಕೆ ಕಥೆ ಬರೆಯೋನ ಸುಮ್ನೆ ಬಿಡಬಾರ್ದು; ಸದ್ರ ಕೊಟ್ರೆ ಇಂದು ಹರಿಗದ್ದೆ ಹುಡ್ಗಿ ನಾಳೆ ಮತ್ತೊಬ್ಬಳು. ತನಗೆ ಹೆಣ್ಣು ಕೊಡೊರಿಲ್ಲಾಂತ ಹೀಗೆ ಮಾಡೋದಾ? ಊರಲ್ಲಿ ಅಮಾಯಕ ಹೆಣ್ಮಕ್ಳು ಜೀವನ ಮಾಡ್ಬೇಕಾ ಬ್ಯಾಡ್ವಾ ಅಂತ ಖ್ಯಾತ ಸಾಹಿತಿಯನ್ನೆ ಕೇಳುವಾ' ಎಂದು ತಯಾರಾಗಿದ್ದಾರೆ" ಎಂದ.

"ಅದು ಕಥೆ ಮಾರಾಯ."

ತಾಳಮದ್ದಲೆಯ ಪ್ರಸಂಗದ ಅರ್ಥಧಾರಿಗಳ ತಾರ್ಕಿಕ ಮಂಡನೆಯನ್ನು ಕೇಳಿಸಿಕೊಂಡ ಬಾಬಣ್ಣ ಅದೇ ಧಾಟಿಯಲ್ಲಿ, "ನೀವು ಹೇಳೋದನ್ನು ನಾನು ಒಪ್ತೇನೆ; ಆದ್ರೆ ಜನ? ಕವಿ ವಾಲ್ಮೀಕಿ ರಾಮಾಯಣದಲ್ಲಿ ತಾನೇ ಸೃಷ್ಟಿಸಿದ ಪಾತ್ರ ಸೀತೆಗೆ ಸಂಕಷ್ಟ ತಂದೊಡ್ಡಿದ; ಆ ತಪ್ಪಿಗಾಗಿ ತಿರಸ್ಕಾರಕ್ಕೊಳಗಾದ ಅವಳಿಗೆ ತನ್ನ ಆಶ್ರಮದಲ್ಲಿ ಆಶ್ರಯ ಕೊಟ್ಟ. ಅದೇ ಪ್ರಕಾರ ನಮ್ಮ ಖ್ಯಾತ ಸಾಹಿತಿಗಳು ಪಾಪದ ಹರಿಗದ್ದೆ ತಾಯಿಮಗಳಿಗೆ ಪರಿಹಾರ ಕೊಡ್ಲಿ ಎಂದು ವಾದಿಸ್ತಾರಂತೆ ನಿಮ್ಮ ಮುಂದೆ" ಎಂದ.